ರೈತರ ಕಬ್ಬಿಗೆ ನೀಡಬೇಕಾದ ಬಾಕಿ ಹಣ

691- ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಖಾಸಗಿ ಹಾಗೂ ಸಹಕಾರಿ ಸರ್ಕಾರದ ಸಕ್ಕರೆ ಕಾರ್ಖಾನೆಗಳು ರೈತರು ಸರಬರಾಜು ಮಾಡಿರುವ ಕಬ್ಬಿಗೆ ನೀಡಬೇಕಾದ ಬಾಕಿ ಮೊತ್ತವೆಷ್ಟು?*

ಆ) *ಈ ಪೈಕಿ ಯಾವ ಯಾವ ಕಾರ್ಖಾನೆಗಳಿಗೆ ರೈತರ ಕಬ್ಬಿನ ಬಾಕಿ ಪಾವತಿ ಮಾಡಲು ಸರ್ಕಾರ ಸಾಲ ಬಿಡುಗಡೆ ಮಾಡಿದೆ. ಈ ಸಾಲ ನೀಡಿದ ನಂತರವೂ ರೈತರ ಬಾಕಿ ಸರಿಯಾಗಿ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ರೈತರ ಬಾಕಿ ಪಾವತಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ರೂ. 85.91 ಕೋಟಿ.

ಆ) ಅಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬಿಲ್ ಬಾಕಿ ಪಾವತಿಸಲು ಸರ್ಕಾರವು ಸಾಲ ಬಿಡುಗಡೆ ಮಾಡಿದೆ. ಈ ಸಾಲವನ್ನು ಕಬ್ಬಿನ ಬಿಲ್ ಬಾಕಿ ಪಾವತಿಸಲು ಬಳಸಿದ ನಂತರವೂ ಸದರಿ ಕಾರ್ಖಾನೆಗಳಲ್ಲಿ ರೈತರಿಗೆ ಕೂಡ ಬೇಕಾದ ಬಾಕಿ ಉಳಿದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಬ್ಬು ನುರಿಸುತ್ತಿರುವ ಈ ಚಾಲ್ತಿ ವರ್ಷದ ಬಾಕಿ ಸುಮಾರು ರೂ. 67.00 ಕೋಟಿ ಸೇರಿದ್ದು ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸುತ್ತಾ ಬರುತ್ತಿವೆ. ಹಿಂದಿನ ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳೂ ಸೇರಿ ಎಲ್ಲಾ ಕಾರ್ಖಾನೆಗಳೂ ಕಬ್ಬು ಸರಬರಾಜು ಮಾಡಿದ ರೈತರಿಗೆ ಬಾಕಿಯನ್ನು ವಿಳಂಬವಿಲ್ಲದೆ ಪಾವತಿಸುವಂತೆ ಸೂಚನೆ ನೀಡಲಾಗಿದೆ.

ಮೈಸೂರು ಪೇಪರ್ ಮಿಲ್‌ನಲ್ಲಿ ಕಚ್ಚಾ ವಸ್ತು ತಯಾರಿಕೆಗೆ ಅರಣ್ಯ ಬೆಳೆಸುವುದು

693 - ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಪೇಪರ್ ಮಿಲ್ಸ್ ಕಚ್ಚಾ ವಸ್ತು ತಯಾರಿಕೆಗಾಗಿ ಎಷ್ಟು ಎಕರೆ ಅರಣ್ಯವನ್ನು ಬೆಳೆಸುತ್ತಿದೆ, ಎಲ್ಲೆಲ್ಲಿ ಯಾವ ಗ್ರಾಮಗಳಲ್ಲಿ ಬೆಳೆಸಲಾಗುತ್ತಿದೆ?*

ಆ) *ಎಷ್ಟು ವರ್ಷಗಳಿಂದ ಅರಣ್ಯವನ್ನು ಬೆಳೆಸಲಾಗುತ್ತಿದೆ, ಇದುವರೆವಿಗೂ ಎಷ್ಟು ಹಣವನ್ನು ತೊಡಗಿಸಲಾಗಿದೆ, ಎಷ್ಟು ಕಚ್ಚಾ ವಸ್ತುವನ್ನು ತಯಾರಿಸಲಾಗಿದೆ?*

ಇ) *ಅರಣ್ಯ ಬೆಳೆಸುವ ಕಾರ್ಯದಲ್ಲಿ ಉತ್ತಮ ಫಲಿತಾಂಶ ಲಭ್ಯವಾಗಿದೆಯೇ ಯಾವ ರೀತಿಯ ಫಲಿತಾಂಶ ದೊರೆತಿದೆ, ಇದರಿಂದಾಗಿ ಕಂಪನಿಗೆ ಆಗಿರುವ ಆರ್ಥಿಕ ಲಾಭ ಎಷ್ಟು, ಬೇರೆ ಯಾವ ರೀತಿಯ ಅನುಕೂಲಗಳು ಇದರಿಂದಾಗಿವೆ; ಮಾಹಿತಿ ನೀಡುವುದು?*

ಈ) ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಎಷ್ಟು ಸಿಬ್ಬಂದಿಯನ್ನು ನೇಮಿಸಲಾಗಿದೆ? ಯಾವ ಯಾವ ರೀತಿಯ ಸಿಬ್ಬಂದಿ ತೊಡಗಿಸಲಾಗಿದೆ. ಅವರ ವೇತನ ಶ್ರೇಣಿಯನ್ನೊಳಗೊಂಡಂತೆ ಮಾಹಿತಿ ನೀಡುವುದು?

ಉ) ಈ ಸಿಬ್ಬಂದಿಯ ಮಾಲೀಕರು ಮತ್ತು ಆಡಳಿತ ವರ್ಗ ಎಂಪಿಎಂ ಎಂಬುದು ನಿಜವೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಸರ್ಕಾರದವರಿಂದ 30,000 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಎಂಪಿಎಂಗೆ ನೀಡಲಾಗಿದೆ. ಇದು ವರೆಗೂ ಒಟ್ಟು 31,916 ಹೆಕ್ಟೇರ್ ಪ್ರದೇಶದಲ್ಲಿ (ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಸೇರಿ) (ಸಂಶೋಧನೆ ನೆಡುತೋಪುಗಳು ಸೇರಿ) ಅರಣ್ಯ ಬೆಳೆಸಲಾಗಿದೆ.

ಆ) 1981ನೇ ಇಸವಿಯಿಂದ ನೆಡುತೋಪುಗಳನ್ನು ಬೆಳೆಸಲಾಗಿದೆ. ಇದುವರೆಗೂ ಒಟ್ಟು ರೂ.92.46 ಕೋಟಿ ಹಣವನ್ನು ತೊಡಗಿಸಲಾಗಿದೆ. 7,06,168 (ಟನ್‌ಗಳಲ್ಲಿ)ಗಳಷ್ಟು ಕಚ್ಚಾ ವಸ್ತುಗಳನ್ನು ತಯಾರಿಸಲಾಗಿದೆ.

ಇ) ಕಂಪನಿಯು ಯಾವುದೇ ಇಳುವರಿ ಇಲ್ಲದಂತೆ ಒಣ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್‌ಗೆ ಸುಮಾರು 20 ಟನ್ ಇಳುವರಿ ಬರುವ ನೀಲಗಿರಿ ಮರಗಳನ್ನು ಹೊಂದಿದೆ. ಇದು ಮಲೆನಾಡು ಪ್ರದೇಶದಲ್ಲಿ 60 ಟನ್‌ಗಳ ಅಕೇಷಿಯಾ ಮತ್ತು ಕ್ಯಾಷ್ಯರಿನ ಮರಗಳನ್ನು ಪಡೆಯುತ್ತದೆ. ಈ ಯೋಜನೆಯು ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಶೇಕಡಾ 35ರಷ್ಟು ಮರದ ಭಾಗಗಳನ್ನು ಉಚಿತವಾಗಿ ಗ್ರಾಮಸ್ಥರಿಗೆ ನೀಡಲಾಗುತ್ತಿದೆ. ಶೇಕಡಾ 12.5 ರಷ್ಟು ಭಾಗವನ್ನು ಅರಣ್ಯ ಇಲಾಖೆಗೆ ಗುತ್ತಿಗೆ ಹಣದ ಮೂಲಕ ನೀಡಲಾಗುತ್ತಿದೆ ಹಾಗೂ ಇದಕ್ಕೆ ಬದಲಾಗಿ ಅರಣ್ಯ ಇಲಾಖೆಯು ಇದನ್ನು ಗ್ರಾಮಸ್ಥರಿಗೆ ಉರುವಲು ಸೌದೆಯಾಗಿ ವಿತರಿಸುತ್ತಾರೆ. ಇದಲ್ಲದೆ ಕಂಪನಿಯು ಮೂಲ ಕಚ್ಚಾವಸ್ತುಗಳ ಸರಬರಾಜಿನ ಮೂಲವನ್ನು ಹೊಂದಿದ್ದು ಇದು ಹೊರಗಡೆಯಿಂದ ಹೆಚ್ಚಿನ ಬೆಲೆಗೆ ಏರೀದಿಸುವುದನ್ನು ತಪ್ಪಿಸಿದೆ.

ಈ) ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಒಟ್ಟು 692 ಜನರಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

1.	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನಿರ್ದೇಶಕರು (ಅರಣ್ಯ)	-	1	ಎರವಲು ಸೇವೆಯಲ್ಲಿ ಇರುವವರು
2.	ಅರಣ್ಯ ಸಂರಕ್ಷಣಾಧಿಕಾರಿಗಳು	-	1	
3.	ಉಪ ಅರಣ್ಯ ಸಂರಕ್ಷಾಧಿಕಾರಿಗಳು	-	5	
4.	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	-	1	

5.	ವಲಯಾರಣ್ಯಾಧಿಕಾರಿಗಳು	-	29	
6.	ವನಪಾಲಕರು	-	9	
7.	ಮೊದಲನೇ ದರ್ಜೆ ಸಹಾಯಕರು	-	2	ವೇತನ ಸರ್ಕಾರದ
8.	ವಿನ್ಯಾಸಕರು	-	1	ನಿಯಮಾನುಸಾರ
9.	ಅಧೀಕ್ಷಕರು	-	1	
	ಒಟ್ಟು		**50**	

ಆ) ಕಾರ್ಖಾನೆಯ ನೌಕರರು 108 (ಕಂಪನಿಯ ವೇತನಶ್ರೇಣಿ ಪ್ರಕಾರ)

ಇ) ಕ್ರೋಢಿಕೃತ ಅರಣ್ಯ ಕಾರ್ಮಿಕರು 534 (ಸಂಚಿತ ವೇತನ ರೂ.1000 ದಿಂದ ರೂ.1490.00 ರವರೆಗೆ. ಈಗ ಕನಿಷ್ಟ ವೇತನ ಜಾರಿಗೊಳಿಸಲಾಗುತ್ತಿದೆ).

ಒಟ್ಟು **692**

ಉ) ಎಂ.ಪಿ.ಎಂ. ಈ ಸಿಬ್ಬಂದಿಯ ಆಡಳಿತ ವರ್ಗ.

ಜಮೀನುಗಳ ಮರು ಭೂಮಾಪನ

695 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕೆ.ಎಲ್.ಆರ್. ಕಾನೂನು ಪ್ರಕಾರ ಪ್ರತಿ 30 ವರ್ಷಗಳಿಗೊಮ್ಮೆ ಜಮೀನುಗಳ ಮರು ಭೂಮಾಪನಾ (ರೀಸರ್ವೆ) ಮಾಡಬೇಕಾಗಿದ್ದರೂ, ಸರ್ಕಾರ ಇದುವರೆವಿಗೂ ರೀಸರ್ವೆ ಮಾಡಿಸದೆ ಇದ್ದುದರಿಂದ ಜಮೀನುಗಳಲ್ಲಿಯ ಬದಲಾವಣೆಗಳನ್ನು ಗುರ್ತಿಸಲಾಗದೆ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2. *ಹಾಗಿದ್ದಲ್ಲಿ, ಅದರ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಜಮೀನುಗಳ ಮರು ಭೂಮಾಪನ (ರೀಸರ್ವೆ) ಕಾರ್ಯವನ್ನು 30 ವರ್ಷಗಳಿಗೊಮ್ಮೆ ಮಾಡಬೇಕೆಂದು ಕೆ.ಎಲ್.ಆರ್. ನಿಯಮಾವಳಿಯಲ್ಲಿ ಎಲ್ಲೂ ಇರುವುದಿಲ್ಲ. ಆದರೆ ಸದರಿ ನಿಯಮಾವಳಿಯಲ್ಲಿ ಸರ್ಕಾರ ಇಚ್ಛಿಸಿದಲ್ಲಿ ಯಾವಾಗ ಬೇಕಾದರೂ ಮರು ಭೂಮಾಪನ (ರೀ ಸರ್ವೆ) ಕಾರ್ಯವನ್ನು ಕೈಗೊಳ್ಳಬಹುದೆಂದು ಸೂಚಿಸಲಾಗಿರುತ್ತದೆ. ರೀಸರ್ವೆ ಮಾಡಿಸದೆ ಇದ್ದುದರಿಂದ,